24. ರೋಯಿಂಗ್
25. ಬಿಲಿಯರ್ಡ್ಸ್
26. ಬಾಲ್ ಬ್ಯಾಡ್‌ಮಿಂಟನ್
27. ಬ್ಯಾಸ್ಕೆಟ್‌ಬಾಲ್
28. ಬಾಕ್ಸಿಂಗ್
29. ಸೈಕ್ಲಿಂಗ್
30. ಕ್ರಿಕೆಟ್
31. ಮಹಿಳಾ ಹಾಕಿ
32. ಮಹಿಳಾ ಕ್ರಿಕೆಟ್

ಹೊರ ರಾಜ್ಯದ ಏಕ ಅಂಕಿ ಲಾಟರಿ

892(1739) ಶ್ರೀ ಹೆಚ್.ಎಂ.ರೇವಣ್ಣ(ಮಾಗಡಿ) :- ಮಾನ್ಯ ಹಣಕಾಸಿನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊರ ರಾಜ್ಯದ ಏಕ ಅಂಕಿ ಲಾಟರಿ ಟಿಕೇಟ್ ರಾಜ್ಯದಲ್ಲಿ ಮಾರಾಟವಾಗುತ್ತಿದೆಯೇ;

ಆ) ಇದನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ;

ಇ) ಹಾಗಿದ್ದಲ್ಲಿ, ಯಾವಾಗ ರದ್ದು ಪಡಿಸಲಾಗುವುದು?

ಶ್ರೀ ರಾಮಲಿಂಗಾರೆಡ್ಡಿ (ಹಣಕಾಸಿನ ರಾಜ್ಯ ಸಚಿವರು) :-

ಅ) ಹೌದು

ಆ) ಇತರೆ ರಾಜ್ಯಗಳ ಒಂದಂಕಿಯ ಲಾಟರಿ ಮಾರಾಟವನ್ನು ರದ್ದುಪಡಿಸಲು ಸರ್ಕಾರ ಇಚ್ಚಿಸುತ್ತಾದರೂ ಕಾನೂನು ಅಡಚಣೆಗಳಿರುವುದರಿಂದ ಇದುವರೆವಿಗೂ ಇದನ್ನು ರದ್ದು ಮಾಡಲು ಸಾಧ್ಯವಾಗಿರುವುದಿಲ್ಲ.

ಇ) (ಆ)ನಲ್ಲಿ ಉತ್ತರಿಸುವುದರಿಂದ, ಉದ್ಭವಿಸುವುದಿಲ್ಲ.

ಕನಕಪುರ ತಾಲ್ಲೂಕಿನಲ್ಲಿ ಟೌನ್ ಆರಕ್ಷಕ ಠಾಣೆ.

894(1475) ಶ್ರೀ ಬಿ.ಕೆ. ಶಿವಕುಮಾರ(ಸಾತನೂರು) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕನಕಪುರ ತಾಲ್ಲೂಕಿನಲ್ಲಿ ಟೌನ್ ಆರಕ್ಷಕ ಠಾಣೆ ಮತ್ತು ದೊಡ್ಡ ಹಾಲಹಳ್ಳಿಯಲ್ಲಿ ಔಟ್‌ಪೋಸ್ಟ್ ಆರಕ್ಷಕ ಠಾಣೆ ಪ್ರಾರಂಭಿಸುವ ಆಲೋಚನೆಯು ಸರ್ಕಾರದ ಗಮನದಲ್ಲಿದೆಯೇ?

2) ಕನಕಪುರ ತಾಲ್ಲೂಕಿನಲ್ಲಿ ಎಷ್ಟುಆರಕ್ಷಕ ಠಾಣೆಗಳಿವೆ? ಅಲ್ಲಿ ಈಗಿರುವ ಆರಕ್ಷಕ ಸಿಬ್ಬಂದಿಯ ಸಂಖ್ಯೆ ಎಷ್ಟು? ಇನ್ನೂ ಹೆಚ್ಚು ಸಿಬ್ಬಂದಿಯನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

3) ಕನಕಪುರ ಟೌನಿನಲ್ಲಿ ಆರಕ್ಷಕ ಠಾಣೆ ಕಛೇರಿಯ ಕಟ್ಟಡ ಕಟ್ಟಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೆ? ಹಾಗಿದ್ದಲ್ಲಿ ಇದು ಯಾವ ಹಂತದಲ್ಲಿದೆ.

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

1) ಇಲ್ಲ.

2) ಕನಕಪುರ ತಾಲ್ಲೂಕಿನಲ್ಲಿ 5 ಪೋಲಿಸ್ ಠಾಣೆಗಳಿವೆ, ಪ್ರತಿ ಪೋಲಿಸ್ ಠಾಣೆಯ ಸಿಬ್ಬಂದಿ ಈ ಕೆಳಗಿನಂತಿದೆ.

	ಪೋಲಿಸ್‌ಠಾಣೆ ಹೆಸರು	ಪಿಎಸ್‌ಐ	ಎಎಸ್‌ಐ	ಹೆಚ್	ಪಿಸಿ
1)	ಕನಕಪುರ	1	1	5	23
2)	ಹಾರೋಹಳ್ಳಿ	1	1	2	10
3)	ಕೋಡಿಹಳ್ಳಿ	1	1	2	9
4)	ಸಾತನೂರು	1	1	2	9
5)	ತಲಘಟ್ಟಪುರ	1	1	6	22
	ಒಟ್ಟು	**5**	**5**	**17**	**73**

1993-94 ನೇ ಸಾಲಿಗಾಗಿ ಕನಕಪುರ ಪೋಲಿಸ್ ಠಾಣೆಗೆ 1 ಪಿಎಸ್‌ಐ, 1ಎಎಸ್‌ಐ, 5ಹೆಚ್‌ಸಿ, 7ಪಿಸಿಗಳ ಅಧಿಕ ಬಲವನ್ನು ಈಗಾಗಲೇ ಮಂಜೂರು ಮಾಡಲಾಗಿದೆ. ಉಳಿದ 4 ಪೋಲಿಸ್ ಠಾಣೆಗಳಿಗೆ 1994-95ನೇ ಸಾಲಿನಲ್ಲಿ ಹಚ್ಚಿನ ಸಿಬ್ಬಂದಿ ಒದಿಗಿಸುವ ವಿಷಯ ಸರಕಾರದ ಪರಿಶೀಲನೆಯಲ್ಲಿದೆ.

ಇ) ಇಲ್ಲ.

ರಾಜ್ಯದಲ್ಲಿರುವ ಪ್ರವಾಸಿಕೇಂದ್ರಗಳು

895(1744) ಶ್ರೀ ಡಿ.ಹಲಗೇಗೌಡ(ಪಾಂಡುಪುರ):- ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಒಟ್ಟು ಪ್ರವಾಸಿ ಕೇಂದ್ರಗಳೆಷ್ಟು?

ಆ) 1993-94 ರಲ್ಲಿ ಹೊಸದಾಗಿ ಕೇಂದ್ರಗಳನ್ನು ಗುರುತಿಸುವಿರಾ?

ಇ) ಪಾಂಡುಪುರ ತಾಲ್ಲೂಕಿನ ಪ್ರಸಿದ್ಧ ಯಾತ್ರಾ ಸ್ಥಳಗಳಾದ ಮೇಲುಕೋಟೆ ಮತ್ತು ಕೊಣ್ಣೂರು ಸ್ಥಳಗಳನ್ನು ಪ್ರವಾಸಿ ಕೇಂದ್ರದ ಪಟ್ಟಿಗೆ ಸೇರಿಸಿಕೊಂಡು ಅಭಿವೃದ್ಧಿ ಪಡಿಸುವ ಯೋಜನೆ